**ಭಾರತೀಯ ಜನತಾ ಪಾರ್ಟಿ**

**(ಕೇಂದ್ರ ಕಚೇರಿ)**

**11, ಅಶೋಕ ರಸ್ತೆ, ನವದೆಹಲಿ–110001**

ದಿನಾಂಕ: ಮಾರ್ಚ 07, 2013

**ಭಾಜಪ ರಾಷ್ಟ್ರೀಯ ವಕ್ತಾರ ಮತ್ತು ಸಂಸದ ಶ್ರೀ ಪ್ರಕಾಶ್ ಜಾವ್ಡೆಕರ್ ಹೊರಡಿಸಿದ ಪತ್ರಿಕಾ ಪ್ರಕಟಣೆ**

**ನಾಗರಿಕ ಸನ್ನದು ಕಾಯಿದೆ 2011**

ಕೇಂದ್ರ ಸಂಪಟವು ಅಂಗೀಕರಿಸಿದ ನಾಗರಿಕ ಸನ್ನದು ಕಾಯಿದೆ 2011 ಅನ್ನು ಎಲ್ಲಾ ರಾಜ್ಯಗಳೂ ಚಾಚುತಪ್ಪದೆ ಅನುಸರಿಸಬೇಕಾದ ಕಾರಣ ಇದರಿಂದ ರಾಜ್ಯಗಳ ಹಕ್ಕುಗಳ ಹರಣವಾಗಿದೆ. ಈಗಾಗಲೇ ಹತ್ತಕ್ಕೂ ಹೆಚ್ಚು ರಾಜ್ಯಗಳು ತಮ್ಮದೇ ಆದ ನಾಗರಿಕ ಸನ್ನದು ಕಾಯಿದೆ ಅಥವಾ ಸಾರ್ವಜನಿಕ ಸೇವೆಗಳ ಖಾತ್ರಿ ಕಾಯಿದೆಯನ್ನು ಜಾರಿಗೆ ತಂದಿವೆ. ಜಮ್ಮು ಹಾಗೂ ಕಾಶ್ಮೀರ, ದೆಹಲಿ, ಬಿಹಾರ್, ಮಧ್ಯ ಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ್, ಪಂಜಾಬ್, ಉತ್ತರಖಂಡ್ ಹಾಗೂ ಹಿಮಾಚಲ ಪ್ರದೇಶ ರಾಜ್ಯಗಳು ತಮ್ಮದೇ ಕಾನೂನುಗಳನ್ನು ರೂಪಿಸಿವೆ. ಅವುಗಳಲ್ಲಿ ಹಲವಾರು ರಾಜ್ಯಗಳು, ಪ್ರಸ್ತಾಪಿತ ಕೇಂದ್ರ ಕಾಯಿದೆಗಿಂತಲೂ ಉತ್ತಮವಾದ ಲಕ್ಷಣಗಳನ್ನು ಹೊಂದಿವೆ.

ರಾಜ್ಯ ಸಾರ್ವಜನಿಕ ಸೇವೆಗಳ ಅನುಷ್ಠಾನಕ್ಕೆ ಸಂವಿಧಾನದ ಎರಡನೆ ಸೂಚಿಯ ಕ್ರಮ ಸಂಖ್ಯೆ 41 ಸ್ಪಷ್ಟವಾದ ಅಧಿಕಾರವನ್ನು ರಾಜ್ಯಗಳಿಗೆ ನೀಡಿದೆ. ಆದ್ದರಿಂದ, ಸೂಚಿ ಮೂರರ ಕ್ರಮ ಸಂಖ್ಯೆ 8ರ ಅನ್ವಯ ನಾಗರಿಕ ಸನ್ನದು ಕಾಯಿದೆಯನ್ನು ರಾಜ್ಯಗಳ ಮೇಲೆ ಹೇರುವುದರಿಂದ ಭಾರತೀಯ ಸಂವಿಧಾನದ ಸದಾಶಯವಾದ ಒಕ್ಕೂಟ ವ್ಯವಸ್ಥೆಗೆ ಅಪಚಾರ ಮಾಡಿದಂತಾಗುತ್ತದೆ. ಕೇಂದ್ರ ಸರ್ಕಾರ ಕೇವಲ ಮಾದರಿ ಕಾನೂನು ಸೂಚಿಸಿದ್ದರೆ ಒಳ್ಳೆಯದಿತ್ತು.

**ರಾಷ್ಟ್ರೀಯ ಜನಸಂಖ್ಯಾ ನೊಂದಣಿ**

**ಆಧಾರ್ ಯೋಜನೆ ಅಡಿ ಸಂಗ್ರಹಿತ ಬಯೋಮೆಟ್ರಿಕ್ ದಾಖಲೆಯ ಅಸಮರ್ಪಕ ಸಂಗ್ರಹಣೆಯು** ರಾಷ್ಟ್ರೀಯ ಜನಸಂಖ್ಯಾ ನೊಂದಣಿಯ(ಎನ್‌ಪಿಆರ್) ಹಿನ್ನಡೆಗೆ ಕಾರಣವಾಗಿದೆ ಎಂದು ಸರ್ಕಾರ ಕೊನೆಗೂ ಒಪ್ಪಿಕೊಂಡಿದೆ. ಚುಕ್ಕೆಗುರುತುಯಿಲ್ಲದ ಪ್ರಶ್ನೆ ಸಂಖ್ಯೆ 995ಅನ್ನು 06/03/2013ರಂದು ಕೇಳಿದಾಗ, ಸರ್ಕಾರ ನೀಡಿರುವ ಸ್ಪಷ್ಟನೆಯಂತೆ, ಹಾಳೆ ಮಾದರಿಯಲ್ಲಿ ದಾಖಲಾತಿ ಸಂಗ್ರಹ ಇಡೀ ದೇಶದಲ್ಲಿ ಪೂರ್ಣಗೊಂಡಿದ್ದು, 2010ರಲ್ಲಿ ನಡೆದ ಮನೆಗಳ ಕ್ರಮಸಂಖ್ಯೆ ಹಾಗೂ ವಸತಿ ಸಮೀಕ್ಷೆಗಳ ಮಾಹಿತಿಯೂ ಲಭ್ಯವಿವೆ. ಸುಮಾರು 26 ಕೋಟಿ ಅರ್ಜಿದಾರರ ಎನ್‌ಪಿಆರ್ ಮಾದರಿ ವಿವರಗಳ ಸ್ಕ್ಯಾನಿಂಗ್ ಕಾರ್ಯವೂ ಪೂರ್ಣಗೊಂಡಿದೆ. 114ಕ್ಕೂ ಹೆಚ್ಚು ದಾಖಲಾತಿಗಳ ದರ್ಜು (ಡಾಟಾ ಎಂಟ್ರಿ) ಕಾರ್ಯವೂ ಪೂರ್ಣಗೊಂಡಿದೆ. ಆದರೆ, ಕೇವಲ 11 ಕೋಟಿ ಜನರ ಬಯೋಮೆಟ್ರಿಕ್ ದಾಖಲಾತಿ ಮಾತ್ರ ಸಂಗ್ರಹವಾಗಿದೆ.

ಬಯೋಮೆಟ್ರಿಕ್ ದಾಖಲಾತಿಯ ಕೊರತೆಯಿಂದ ಬಹು ಮುಖ್ಯ ಎನ್‌ಪಿಆರ್ ಕಾರ್ಯ ಸ್ಥಗಿತಗೊಂಡಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಅಂತಿಮವಾಗಿ ನಾಗರಿಕರ ದಾಖಲೆ ಹಾಗೂ ನಾಗರಿಕರ ಪತ್ರ ಪ್ರಮುಖವೆನಿಸುತ್ತದೆ. ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಇದು ಮಹತ್ವ ಪಡೆದಿದೆ.

ಸರ್ಕಾರ ಮತ್ತೊಂದು ಪ್ರಶ್ನೆಗೆ ನೀಡಿದ ಉತ್ತರದ ಅನ್ವಯ ಕೇವಲ 22 ಕೋಟಿ ಜನರ ಬಯೊಮೆಟ್ರಿಕ್ ದಾಖಲೆ ಸಂಗ್ರಹವಾಗಿದೆ. ಇವೆರಡೂ ಉತ್ತರಗಳನ್ನು ಒಟ್ಟು ನೋಡಿದಾಗ, ಬಯೊಮೆಟ್ರಿಕ್ ದಾಖಲಾತಿ ಸಂಗ್ರಹ ಪೂರ್ಣವಾಗದ ಕಾರಣ ಎನ್‌ಪಿಆರ್ ಕೆಲಸ ನಿಂತಿರುವುದಂತೂ ಸ್ಪಷ್ಟ.

**ಎನ್‌ಪಿಆರ್ ಆಧಾರದ ಮೇಲೆ ನಾಗರಿಕರ ನೊಂದಣಿ ಸೃಷ್ಟಿಸಲು ಸ್ಪಷ್ಟವಾದ ಮಾರ್ಗಸೂಚಿಯನ್ನು ಸರ್ಕಾರ ಅದಷ್ಟು ಬೇಗ ಪ್ರಕಟಿಸಬೇಕು ಎಂದು ಭಾಜಪ ಆಗ್ರಹಿಸುತ್ತದೆ.**

**(ಆರ್.ಕೆ.ಸಿನ್ಹಾ)**
**ಕಾರ್ಯದರ್ಶಿ**
**ಭಾಜಪ ಸಂಸದೀಯ ಪಾರ್ಟಿ**